ಸಂಯುಕ್ತ ಕರ್ನಾಟಕ

### ಟೀಕೆಗಳಿಗೆ ಕಾರ್ಯಗತಗೊಳ್ಳುತ್ತಿರುವ ಯೋಜನೆಯೇ ಉತ್ತರ | ಹೈಟೆಕ್ ಮಾದರಿಯ ಸಂಸ್ಕರಣಾ ಘಟಕ ಪ್ರಾರಂಭ

# ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಲೋಕಾರ್ಪಣೆ 16ರಂದು

**ಹಳಿಯಾಳ:** ತಾಲೂಕಿನ ಗ್ರಾಮಾಂತರ ಭಾಗದ ಜನರು ನಿರೀಕ್ಷಿಸಿದ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯು ಮುಂದಿನವಾರ ಫೆಬ್ರವರಿ 16ರಂದು ಭತ್ರನಾಳ ಗ್ರಾಮದಲ್ಲಿ ಲೋಕಾರ್ಪಣೆಯಾಗಲಿದೆ ಎಂದು ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಹಾಗೂ ಹಿರಿಯ ಶಾಸಕ ಆರ್.ವಿ. ದೇಶಪಾಂಡೆ ಹೇಳಿದರು.

ಭಾನುವಾರ ಪಟ್ಟಣದ ತಮ್ಮ ನಿವಾಸದಲ್ಲಿ ಆಯೋಜಿಸಿದ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ತಾಲೂಕಿನೆಲ್ಲೆಡೆ ಬಹುಗ್ರಾಮ ಯೋಜನೆಯನ್ನು ಹಂತಹಂತವಾಗಿ ಆರಂಭಿಸಲಾಗುತ್ತಿದ್ದು, ಇಡೀ ತಾಲೂಕಿನ ಗ್ರಾಮಾಂತರ ಭಾಗಗಳಿಗೆ ನೀರು ಪೂರೈಕೆ ಆರಂಭವಾದ ನಂತರ ಬಹುದೊಡ್ಡ ಪ್ರಮಾಣದಲ್ಲಿ ಯೋಜನೆಯಉದ್ಘಾಟನೆನೆರವೇರಿಸಲಾಗುವುದು ಎಂದರು.

ಬಹುಗ್ರಾಮ ಯೋಜನೆ ಮಂಜೂರಾದಾಗ, ನನ್ನ ರಾಜಕೀಯ ಮಿತ್ರರು ಇಡೀ ತಾಲೂಕಿಗೆ ಕುಡಿಯುವ ನೀರು ಪೂರೈಕೆ ಸಾಧ್ಯವೇ ಎಂದು ಟೀಕೆ- ಟಿಪ್ಪಣಿಗಳನ್ನು ಮಾಡಿದರಲ್ಲದೇ, ಇದೊಂದು ಚುನಾವಣಾ ಸ್ಟಂಟ್ ಎಂದು ಹೀಯಾಳಿಸಿದ್ದರು. ಅವರ ಟೀಕೆ ಟಿಪ್ಪಣಿಗಳಿಗೆ ಈಗ ಕಾರ್ಯಗತ ಗೊಳ್ಳುತ್ತಿರುವ ಈ ಯೋಜನೆಯೇ ಉತ್ತರವಾಗಿದೆ ಎಂದರು.

**116ಕೋಟಿ ರೂ. ಯೋಜನೆ:**

ಅಂದಾಜು ರೂ. 116 ಕೋಟಿ ಮೊತ್ತದ ಈ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಲ್ಲಿ ತಾಲೂಕಿನ 113 ಗ್ರಾಮಗಳಿಗೆ ಕಾಳಿನದಿಯಿಂದ ಕುಡಿಯುವ ನೀರನ್ನು ಪೂರೈಸಲಾಗುವುದು. ಈ ಯೋಜನೆಯಡಿಯಲ್ಲಿ ಎಲ್ಲಾ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರನ್ನು ಪೂರೈಸಲು ಯಡೋಗಾ ಗ್ರಾಮದ ಬಳಿ ಆಧುನಿಕ ತಂತ್ರಜ್ಞಾನವುಳ್ಳ ಹೈಟೆಕ್ ಮಾದರಿಯ ಸಂಸ್ಕರಣಾ ಘಟಕ ಪ್ರಾರಂಭಿಸಲಾಗಿದೆ ಎಂದರು.

**ಒಳಚರಂಡಿ ಯೋಜನೆ:**

ಹಳಿಯಾಳ ಪಟ್ಟಣದ ಒಳಚರಂಡಿ ಯೋಜನೆಯು ನಾಲ್ಕೈದು ತಿಂಗಳಲ್ಲಿ ಪ್ರಾರಂಭವಾಗಲಿದೆ. ಈ ಯೋಜನೆಯ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ 5 ವರ್ಷಗಳ ಅವದಿಗಾಗಿ ಅನುದಾನ ಮಂಜೂರು ಮಾಡಬೇಕೆಂಬ ನಮ್ಮ ಪ್ರಸ್ತಾವಣೆಗೆ ರಾಜ್ಯ ಕ್ಯಾಬಿನೆಟ್ ಮಂಜೂರಾತಿ ದೊರೆತಿದ್ದು, 10.60 ಕೋಟಿ ಅನುಮೋದನೆ ನೀಡಲಾಗಿದ್ದು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದರು.

**ಟೋಯೋಟಾ ಪ್ರಯೋಗಾಲಯ:**

ಶೈಕ್ಷಣಿಕ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ ಪಟ್ಟಣದ ಸರ್ಕಾರಿ ಶಿವಾಜಿ ಪಪೂ ಕಾಲೇಜಿಗೆ ಬೆಂಗಳೂರಿನ ಟೋಯೋಟಾ ಉದ್ಯಮದಿಂದ ಆಟೋಮೊಬೈಲ್ ಪ್ರಯೋಗಾಲಯವನ್ನು ಸ್ಥಾಪಿಸ ಲಾಗುವುದೆಂದರು. ಹಳಿಯಾಳ ವಿಧಾನಸಭಾ ಕ್ಷೇತ್ರದಲ್ಲಿ 11 ಶಾಲಾ ತರಗತಿ ಕೊಠಡಿಗಳ ನಿರ್ಮಾಣಕ್ಕಾಗಿ 188 ಲಕ್ಷ ಮಂಜೂರಾಗಿದೆ ಎಂದರು.

**ರಸ್ತೆ/ ಸೇತುವೆಗೆ 6ಕೋಟಿ:**

ಹಳಿಯಾಳ ಮತ್ತು ಜೋಯಿಡಾ ತಾಲೂಕಿನಲ್ಲಿ ರಸ್ತೆ ಹಾಗೂ ಸೇತುವೆಗಳ ಅಭಿವೃದ್ಧಿಗಾಗಿ 6ಕೋಟಿ ಅನುದಾನವು ಮಂಜೂರಾಗಿದ್ದು, ಅತೀ ಶೀಘ್ರದಲ್ಲಿ ಯೋಜನೆಗೆ ಚಾಲನೆ ನೀಡುವ ಕಾರ್ಯ ಆರಂಭಿಸಲಾಗುವುದೆಂದರು. ಜೋಯಿಡಾ ತಾಲೂಕಿನಲ್ಲಿ ಕಾಲಸುಂಕಗಳ ನಿರ್ಮಾಣಕ್ಕೆ ಮಂಜೂರಾತಿ ದೊರೆತಿದ್ದು, ಬಡಾಕಾನಶಿರಡಾ, ಹನೋರ್ಡಾ, ನಾರನಳ್ಳಿ, ಪಾಲ್ವಾ, ಸಿಸ್ಲಾಯ ಹಾಗೂ ಸಕಲಿಮಾಳ ಗ್ರಾಮಗಳಲ್ಲಿ ಕಾಲಸುಂಕ ನಿರ್ಮಾಣಕ್ಕಾಗಿ 1 ಕೋಟಿ ಮಂಜೂರಾಗಿದೆ ಎಂದರು. ಜೋಯಿಡಾ ತಾಲೂಕಿನ ಸರ್ಕಾರಿ ಆಸ್ಪತ್ರೆಗೆ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗಾಗಿ 1.50ಕೋಟಿ ಅನುದಾನವು ಮಂಜೂರಾಗಿದೆ, ಇನ್ನೂ ದಾಂಡೇಲಿ ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆಗಾಗಿ 1.50ಕೋಟಿ ಅನುದಾನ ಮಂಜೂರಾಗಿದೆ ಎಂದರು.



ಸುದ್ದಿಗೋಷ್ಠಿಯಲ್ಲಿ ಹಿರಿಯ ಶಾಸಕ ದೇಶಪಾಂಡೆ ಮಾತನಾಡಿದರು.

ಬೆಂಗಳೂರಿನ "ಹ್ಯಾವ್ ಎ ಹಾರ್ಟ್ ಫೌಂಡೇಷನ್" ವತಿಯಿಂದ ರಾಮನಗರ, ತೇರಗಾಂವ ಮತ್ತು ಹಂಪಿಹೋಳಿಯ ಮೂರು ಜನರಿಗೆ ಆರೋಗ್ಯ ಸಹಾಯ ಯೋಜನೆಯಲ್ಲಿ 30ಸಾವಿರ ಆರ್ಥಿಕ ಸಹಾಯ ಮಂಜೂರಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣ ಪಾಟೀಲ, ರವಿ ತೋರಣಗಟ್ಟಿ ಇದ್ದರು.

**ಇಂಜಿನಿಯರಿಂಗ್ ಕಾಲೇಜಿಗೆ ಅನುದಾನ:**

**ರಾಜ್ಯ ಸರ್ಕಾರದ ಐಟಿ/ಬಿಟಿ ಇಲಾಖೆಯು ಐದು ವರ್ಷಗಳ ಕಾಲಾವದಿಗೆ 1000ಕೋಟಿ ವೆಚ್ಚದ "ಸ್ಥಳೀಯ ಆರ್ಥಿಕತೆ ವೇಗವರ್ಧಕ ಕಾರ್ಯಕ್ರಮ"ಎಂಬ ಸೈಬರ್ ಭದ್ರತಾ ಕೌಶಲ್ಯ ತಂತ್ರಜ್ಞಾನದ ಯೋಜನೆಯನ್ನು ಹಮ್ಮಿಕೊಳ್ಳುತ್ತಿದೆ. ಈ ಯೋಜನೆಗಾಗಿ ಹಳಿಯಾಳದಲ್ಲಿ ಕೆ.ಎಲ್.ಎಸ್ ಇಂಜಿನಿಯರಿಂಗ್ ಕಾಲೇಜು ಆಯ್ಕೆಯಾಗಿರುವುದು ನಮಗೆಲ್ಲಾ ಹೆಮ್ಮೆಯ ಹಾಗೂ ಗೌರವದ ಬೆಳವಣಿಗೆಯಾಗಿದೆ ಎಂದರು. ಈ ಯೋಜನೆಯಲ್ಲಿ ಹಳಿಯಾಳದ ಇಂಜಿನಿಯರಿಂಗ್ ಕಾಲೇಜಿಗೆ 1.25ಕೋಟಿ ವೆಚ್ಚದಲ್ಲಿ ಸೈಬರ್ ಭದ್ರತಾ ನವೀನತಾ ಪ್ರಯೋಗಾಲಯವನ್ನು ಪ್ರಾರಂಭಿಸಲಾಗುವುದೆಂದರು.**

## ಯುಜಿಡಿ ಕಾರ್ಯಾಚರಣೆ, ನಿರ್ವಹಣೆಗೆ 10.60 ಕೋಟಿ ರೂ. ಮಂಜೂರು

# ಪ್ರಸ್ತಾವಕ್ಕೆ ಸಚಿವ ಸಂಪುಟ ಒಪ್ಪಿಗೆ

**ವಿಜಯವಾಣಿ ಸುದ್ದಿಜಾಲ ಹಳಿಯಾಳ**

ಪುರಸಭೆ ವ್ಯಾಪ್ತಿಯ ಒಳಚರಂಡಿ (ಯುಜಿಡಿ) ವ್ಯವಸ್ಥೆಯ ಕಾರ್ಯಾಚರಣೆ ಹಾಗೂ ನಿರ್ವಹಣೆಗೆ ಸಂಬಂಧಿಸಿದಂತೆ ಸಚಿವ ಸಂಪುಟದಿಂದ 5 ವರ್ಷಗಳ ಅವಧಿಗೆ 10.60 ಕೋಟಿ ರೂ. ಅಂದಾಜು ವೆಚ್ಚದ ಪ್ರಸ್ತಾವನೆಗೆ ಒಪ್ಪಿಗೆ ಸಿಕ್ಕಿದ್ದು, ಪಟ್ಟಣದಲ್ಲಿ ಯುಜಿಡಿ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸಲು ಇದರಿಂದ ನೆರವಾಗಲಿದೆ ಎಂದು ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಹಾಗೂ ಶಾಸಕ ಆರ್.ವಿ. ದೇಶಪಾಂಡೆ ಹೇಳಿದರು.



**ಆರ್.ವಿ. ದೇಶಪಾಂಡೆ**

ಪಟ್ಟಣದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಳಿಯಾಳ, ದಾಂಡೇಲಿ ಹಾಗೂ ಜೊಯಿಡಾ ತಾಲೂಕುಗಳಲ್ಲಿ ಹೊಸ ಶಾಲಾ ಕೊಠಡಿಗಳ ನಿರ್ಮಾಣಕ್ಕೂ ಒಟ್ಟು 188.65 ಲಕ್ಷ ರೂಪಾಯಿ ಅನುದಾನ ಮಂಜೂರಿಯಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಡಿ ಹಳಿಯಾಳ ಹಾಗೂ ಜೊಯಿಡಾ ತಾಲೂಕುಗಳಲ್ಲಿ ರಸ್ತೆ ಮತ್ತು ಸೇತುವೆಗಳ ಅಭಿವೃದ್ಧಿಗೆ 6 ಕೋಟಿ ರೂ. ಅನುದಾನ ಮಂಜೂರಾಗಿದೆ ಎಂದರು.

ಆರೋಗ್ಯ ಕ್ಷೇತ್ರದಲ್ಲಿಯೂ ಹಲವು ಕಾಮಗಾರಿಗಳಿಗೆ ಸರ್ಕಾರದಿಂದ ನೆರವು ದೊರೆತಿದೆ. ಜೊಯಿಡಾ ತಾಲೂಕಾಸ್ಪತ್ರೆಯಲ್ಲಿ ಒಳಚರಂಡಿ ಸಂಸ್ಕರಣಾ ಘಟಕ ನಿರ್ಮಾಣ ಹಾಗೂ ರೂಫ್‌ಶೀಟಿಂಗ್ ಅಳವಡಿಕೆಗೆ 1.5 ಕೋಟಿ ರೂ. ಮಂಜೂರಾಗಿದೆ. ದಾಂಡೇಲಿ ಸಾರ್ವಜನಿಕ ಆಸ್ಪತ್ರೆಯಲ್ಲಿ ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆಯ ದುರಸ್ತಿ ಸೇರಿದಂತೆ ಇತರ ದುರಸ್ತಿ ಕಾಮಗಾರಿಗಳಿಗೆ 1.5 ಕೋಟಿ ರೂ.ಗಳ ಅನುದಾನ ಒದಗಿಸಲಾಗಿದೆ ಎಂದರು.

ಲೋಕೋಪಯೋಗಿ ಇಲಾಖೆಯ ಅನುದಾನದಡಿ ಜೊಯಿಡಾ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಕಾಲುಸಂಕ (ಕಲ್ವರ್ಟ್) ಕಾಮಗಾರಿಗಳಿಗೆ ಒಟ್ಟು 1 ಕೋಟಿ ರೂ. ಅನುದಾನ ಮಂಜೂರಾಗಿದೆ. ಬಡಾಕಾನಿಶಿರಡಾ, ಹರ್ನೋಡಾ ಮಾರ್ಗದಲ್ಲಿ 26 ಲಕ್ಷ ರೂ. ವೆಚ್ಚದಲ್ಲಿ ಕಾಲುಸಂಕ ನಿರ್ಮಾಣಕ್ಕೆ ಅನುಮೋದನೆ ದೊರೆತಿದ್ದು, ಬಡಾಕಾನಿಶಿರಡಾ ಹಾಗೂ ನಾರನಳ್ಳಿ ಗ್ರಾಮಗಳಲ್ಲಿ ತಲಾ 12 ಲಕ್ಷ ರೂ. ವೆಚ್ಚದ ಕಾಮಗಾರಿಗಳನ್ನು ಅನುಷ್ಠಾನಗೊಳ್ಳಲಿದೆ. ಇನ್ನು ಪಾಲ್ಟಾ ಗ್ರಾಮದಲ್ಲಿ 25 ಲಕ್ಷ ರೂ. ಹಾಗೂ ಸಿಸ್ಸಾಯಿಸಕಲಿಮಾಳ ಪ್ರದೇಶದಲ್ಲಿ 25 ಲಕ್ಷ ರೂ.ಗಳ ವೆಚ್ಚದಲ್ಲಿ ಕಾಲುಸಂಕ ನಿರ್ಮಾಣ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ ಎಂದು ಹೇಳಿದರು.

**ಹ್ಯಾವ್ ಎ ಹಾರ್ಟ್ ಫೌಂಡೇಷನ್ ಮೂಲಕ ಆರೋಗ್ಯ ಸಹಾಯ:** ಹ್ಯಾವ್ ಎ ಹಾರ್ಟ್ ಫೌಂಡೇಷನ್ ವತಿಯಿಂದ ಆರೋಗ್ಯ ಸಹಾಯ ಯೋಜನೆಯಡಿ ಮೂರು ಫಲಾನುಭವಿಗಳಿಗೆ ತಲಾ 10 ರೂ. ಸಹಾಯಧನ ನೀಡಲಾಗಿದೆ. ರಾಮನಗರದ ಶ್ರೇಯಾ ಜ್ಞಾನೇಶ್ವರ ದೇಸಾಯಿ, ತೆರಗಾಂವದ ಸುಜಾತಾ ಮಂಜುನಾಥ ನವಲಗಿ ಹಾಗೂ ಹಂಪಿಹೋಳಿಯ ಮಹಾದೇವ ರಾಮಣ್ಣ ಹರಿಜನ ಅವರಿಗೆ ತಲಾ 10 ಸಾವಿರ ರೂ. ನೆರವು ನೀಡಲಾಗಿದೆ ಎಂದರು.

### ವಿಡಿಐಟಿಗೆ 1.25 ಕೋಟಿ ರೂ. ಸೈಬರ್ ಭದ್ರತಾ ಕೇಂದ್ರ

**ಕರ್ನಾಟಕ ಸರ್ಕಾರದ ಇಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ಮೂಲಕ ಜಾರಿಗೊಳ್ಳುತ್ತಿರುವ ಸ್ಥಳೀಯ ಆರ್ಥಿಕತೆ ವೇಗವರ್ಧಕ 1,000 ಕೋಟಿ ರೂ. ಯೋಜನೆಯಡಿ ವಿಶ್ವನಾಥರಾವ್ ದೇಶಪಾಂಡೆ ತಾಂತ್ರಿಕ ಮಹಾವಿದ್ಯಾಲಯ (ವಿಡಿಐಟಿ)ಕ್ಕೆ ಸೈಬರ್ ಭದ್ರತಾ ಸ್ಥಾಪನೆಗಾಗಿ ಐದು ವರ್ಷಗಳ ಅವಧಿಗೆ 1.25 ಕೋಟಿ ರೂ. ಅನುದಾನ ಮಂಜೂರು ಮಾಡಲಾಗಿದೆ. ಈ ಅನುದಾನದಿಂದ ಸೈಬರ್ ಭದ್ರತಾ ನವೀನತಾ ಪ್ರಯೋಗಾಲಯ ಸ್ಥಾಪನೆಯಾಗಲಿದೆ ಎಂದು ತಿಳಿಸಿದರು.**

ಶೈಕ್ಷಣಿಕ ಮೂಲಸೌಕರ್ಯ ಅಭಿವೃದ್ಧಿಯ ಭಾಗವಾಗಿ ಹಳಿಯಾಳದ ಶಿವಾಜಿ ಪಿಯು ಕಾಲೇಜ್‌ನಲ್ಲಿ ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಪ್ರೈವೇಟ್ ಲಿಮಿಟೆಡ್ (ಬಿಡದಿ, ಬೆಂಗಳೂರು) ಸಹಕಾರದೊಂದಿಗೆ ಹೊಸ ಪ್ರಯೋಗಾಲಯವನ್ನು ಸ್ಥಾಪಿಸಲಾಗಿದೆ. ವಿದ್ಯಾರ್ಥಿಗಳಿಗೆ ಉದ್ಯೋಗಮುಖಿ ತರಬೇತಿ ಹಾಗೂ ಪ್ರಾಯೋಗಿಕ ಕಲಿಕೆಗೆ ಇದು ನೆರವಾಗಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣ ಪಾಟೀಲ, ಪ್ರಮುಖರಾದ ರವಿ ತೋರಣಗಟ್ಟಿ ಇದ್ದರು.